ಕಳ್ಳನ ಕೈಯಲ್ಲಿನ ಕೋಲು ಒಂದು ಇಂಚು ಬೆಳೆಯುತ್ತದೆ.

✍️ ಶ್ರೀವಲ್ಲಿ ರೈ ಮಾರ್ಟೆಲ್



ಮೂವರು ಜೊತೆಯಲ್ಲಿದ್ದಾಗ ಒಬ್ಬನ ಹಣ ಕಳುವಾಗಿ ಹೋಗುತ್ತದೆ. ಇದ್ದದ್ದು ಮೂವರೇ ಜನ, ಅದರಲ್ಲಿ ಒಬ್ಬ ಯಾರಾದರೂ ಕಳ್ಳತನ ಮಾಡಿರಲೇಬೇಕು. ಆದರೂ ಯಾರೂ ಒಪ್ಪಿಕೊಳ್ಳಲು ತಯಾರಿರಲಿಲ್ಲ. ದೂರು ರಾಜರ ಆಸ್ಥಾನವನ್ನು ತಲುಪುತ್ತದೆ. ರಾಜ ಎಷ್ಟು ಕೇಳಿದರೂ ಕಳ್ಳ ಯಾರೆಂದು ತಿಳಿಯಲಿಲ್ಲ.

ಆಗ ಮಂತ್ರಿ ಒಂದು ಉಪಾಯ ಮಾಡುತ್ತಾನೆ. ಮೂವರಿಗೂ ಒಂದೊಂದು ಅಡಿ ಉದ್ದದ ಒಂದೊಂದು ಕೋಲನ್ನು ಕೊಟ್ಟು ಹೇಳುತ್ತಾನೆ: "ಇವು ಮೂರು ಮಂತ್ರದ ಕೋಲುಗಳು, ಯಾರು ಕಳವು ಮಾಡಿದ್ದಾರೋ ಅವರ ಕೋಲು ನಾಳೆ ಬರುವಷ್ಟರಲ್ಲಿ ಒಂದು ಇಂಚು ಉದ್ದ ಬೆಳೆಯುತ್ತದೆ. ನಾಳೆ ಇದೇ ಸಮಯಕ್ಕೆ ನೀವು ಮೂವರೂ ಹಿಂತಿರುಗಿ ಬಂದು ನಿಮ್ಮ ಕೋಲನ್ನು ರಾಜನ ಆಸ್ಥಾನದಲ್ಲಿ ಹಾಜರುಪಡಿಸಬೇಕು!”

ನಿಜವಾದ ಕಳ್ಳ ಮನೆಗೆ ಹೋಗಿ ಆಲೋಚನೆ ಮಾಡುತ್ತಾನೆ. 'ನಾಳೆ ಕೋಲು ಒಂದು ಇಂಚು ಉದ್ದ ಬೆಳೆದರೆ ನಾನು ಸಿಕ್ಕಿಬೀಳುತ್ತೇನೆ. ಅದಕ್ಕಾಗಿ ಇಂದೇ ಒಂದು ಇಂಚಿನಷ್ಟು ಕತ್ತರಿಸಿ ತುಂಡು ಮಾಡಿದರೆ ನಾಳೆಗೆ ಸರಿಯಾಗುತ್ತದೆ' ಎಂದುಕೊಂಡು ಒಂದು ಇಂಚು ಅಳೆದು ಅದನ್ನು ಕತ್ತರಿಸುತ್ತಾನೆ.

ಮರುದಿನ ರಾಜಸಭೆಗೆ ಹೋಗಿ ಮೂವರ ಕೋಲನ್ನು ತೋರಿಸಿದಾಗ ಒಬ್ಬನ ಕೋಲು ಒಂದು ಇಂಚು ಗಿಡ್ಡ ಇರುತ್ತದೆ. ಮಂತ್ರಿ ಹೇಳುತ್ತಾನೆ, "ಕಳ್ಳ ಕಳ್ಳತನ ಮಾಡಿಲ್ಲ ಎಂದು ಹೇಳುತ್ತಿದ್ದೆಯಾ? ಅವನ ಹಣವನ್ನು ಹಿಂತಿರುಗಿಸು, ಮತ್ತು ಈ 25 ಛಡಿ ಹೊಡೆತಗಳನ್ನು ಅನುಭವಿಸು." ಎಂದು ಶಿಕ್ಷೆ ವಿಧಿಸುತ್ತಾನೆ.

ನೀತಿ: ಎಷ್ಟೇ ಚಾಣಾಕ್ಷತನ ತೋರಿಸಿದರೂ, ತಪ್ಪು ಮಾಡಿದ ವ್ಯಕ್ತಿ ಕೊನೆಗೆ ಸಿಕ್ಕಿಬೀಳುತ್ತಾನೆ.